ಸಾಕ್ಷಿಯನ್ನು ಈ ದಿನ ದಿನಾಂಕ 04.04.2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ ಅರ್ಜಿದಾರ ಪರವಾಗಿಃ ಶ್ರೀಮತಿ ಎಸ್.ಎಸ್.ಪಿ ವಕೀಲರಿಂದಃ 1 ರಿಂದ 4ನೇ ಎದುರುದಾರರ ಪರವಾಗಿಃ**

2008 ರಲ್ಲಿ ನನ್ನ ತಂದೆ ತೀರಿಕೊಂಡ ನಂತರ ಒಂದನೇ ಅರ್ಜಿದಾರ ಟ್ರಸ್ಟಿನಲ್ಲಿ ಸುರೇಶ ಮತ್ತು ನಾಲ್ಕನೇ ಅರ್ಜಿದಾರರು ಮಾತ್ರ ಟ್ರಸ್ಟಿಗಳಾಗಿದ್ದರು ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರ ಟ್ರಸ್ಟಿನ ಆಜೀವ ಟ್ರಸ್ಟಿಗಳಾಗಿ ನನ್ನ ತಂದೆ, ಗೌರಮ್ಮ, ನಾಲ್ಕನೇ ಅರ್ಜಿದಾರಳು ಮತ್ತು ನನ್ನ ತಮ್ಮ ಸುರೇಶ ಮಾತ್ರ ಇದ್ದರು ಹಾಗೂ ನನ್ನ ತಂದೆ ಮತ್ತು ಗೌರಮ್ಮ ತೀರಿಕೊಂಡ ನಂತರ ನಾಲ್ಕನೇ ಅರ್ಜಿದಾರಳು ಮಾತ್ರ ಟ್ರಸ್ಟಿಯಾಗಿದ್ದರು ಎಂದರೆ ಸರಿಯಲ್ಲ. ಒಂದನೇ ಅರ್ಜಿದಾರ ಟ್ರಸ್ಟನಲ್ಲಿ ನಾನು, 3 ಮತ್ತು 4 ನೇ ಅರ್ಜಿದಾರರು ಮತ್ತು ಸುರೇಶ ಒಟ್ಟು ನಾಲ್ಕು ಜನ ಟ್ರಸ್ಟಿಗಳಾಗಿದ್ದೆವು ಎಂದು ತೋರಿಸುವ ಬಗ್ಗೆ ನಾನು

ಯಾವುದೇ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಒಂದನೇ ಅರ್ಜಿದಾರ ಟ್ರಸ್ಟನ ಟ್ರಸ್ಟಿಯಾಗಿ ಯಾವತ್ತು ಇದ್ದಿಲ್ಲ ಮತ್ತು ಅದರ ಚೇರಮೆನ್ ಆಗಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಒಂದನೇ ಅರ್ಜಿದಾರ ಟ್ರಸ್ಟನ ಕೆಲಸ ಕಾರ್ಯಗಳು ನಿಂತಿತ್ತು ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಸುರೇಶ ಒಂದನೇ ಅರ್ಜಿದಾರ ಟ್ರಸ್ಟನ್ನು ನಡೆಸಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ.

ಸುರೇಶ ತೀರಿಕೊಂಡ ನಂತರ ಅವರ ವಾರಸುದಾರರನ್ನು ಟ್ರಸ್ಟಿಗಳಾಗಿ ಸೇರಿಸುವಂತೆ ಕೇಳಿ ಒಂದನೇ ಎದುರುದಾರಳು ಟ್ರಸ್ಟಗೆ ಅರ್ಜಿ ನೀಡಿರುತ್ತಾಳೆ ಎಂದರೆ ಸರಿಯಲ್ಲ. ಆಗ ಸುರೇಶ ಅವರ ವಾರಸುದಾರರನ್ನು ಟ್ರಸ್ಟಗೆ ತೆಗೆದುಕೊಳ್ಳುವುದಿಲ್ಲ ಎಂದು ನಾನು ಒಂದನೇ ಎದುರುದಾರಳಿಗೆ ಹಾರಿಕೆ ಉತ್ತರ ನೀಡಿದ್ದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಒಂದನೇ ಎದರುದಾರಳು ಅವರನ್ನು ಸುರೇಶ ಅವರ ವಾರಸುದಾರರಾಗಿ ಟ್ರಸ್ಟಗೆ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಸಂಬಂಧಪಟ್ಟ ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ಪೋಲಿಸ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಮತ್ತು 3 ಹಾಗೂ 4 ನೇ ಅರ್ಜಿದಾರರಿಗೆ ಗೊತ್ತಿದ್ದರೂ ಸಹ ಸದರಿ ವಿಷಯ ನನಗೆ ಗೊತ್ತಿಲ್ಲ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆ ತೀರಿಕೊಂಡ ನಂತರ ಸುರೇಶ ಮತ್ತು ನಾವು ಎರಡರಿಂದ ನಾಲ್ಕನೇ ಅರ್ಜಿದಾರರು ಸೇರಿ ನಮ್ಮನ್ನು ಒಂದನೇ ಅರ್ಜಿದಾರ ಟ್ರಸ್ಟಗೆ ಟ್ರಸ್ಟಿಗಳಾಗಿ ಸೇರಿಸಬೇಕು ಎಂದು ಕೋರಿ ಬೆಳಗಾವಿಯ ಮಾನ್ಯ 9 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ಮಿಸಲೇನಿಯಸ್ ನಂಬರ 238/2015 ರಂತೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಯನ್ನು ಸುರೇಶ ಅವರೇ ಈ ಕೇಸಿನ 2 ರಿಂದ 4 ನೇ ಅರ್ಜಿದಾರರನ್ನು ಅಂದರೆ

ನಮ್ಮನ್ನು ಟ್ರಸ್ಟಿಗಳಾಗಿ ಸೇರಿಸಬೇಕು ಎಂದು ಅರ್ಜಿ ನೀಡಿದ್ದು ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಆದ ದಿನಾಂಕ 06.08.2016 ರ ಆದೇಶದ ಮೇರೆಗೆ ನಾವು 2 ರಿಂದ4 ನೇ ಅರ್ಜಿದಾರರು ಒಂದನೇ ಅರ್ಜಿದಾರ ಟ್ರಸ್ಟನ ಟ್ರಸ್ಟಿಗಳಾಗಿ ಸೇರಿಕೊಂಡಿದ್ದು ಮತ್ತು ಒಂದನೇ ಅರ್ಜಿದಾರ ಟ್ರಸ್ಟನ ಟ್ರಸ್ಟಿಗಳಾಗಲು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಂತರ ನಾನು ನಮ್ಮ ತಂದೆಯ ಹಿರಿಯ ಮಗನಾಗಿರುವ ಕಾರಣ ಸುರೇಶ ಹಾಗೂ 3 ಮತ್ತು 4 ನೇ ಅರ್ಜಿದಾರರು ಹಾಗೂ ಹಿರಿಯರ ಸಮ್ಮತಿಯ ಮೇರೆಗೆ ನಾನು ಒಂದನೇ ಅರ್ಜಿದಾರ ಟ್ರಸ್ಟಿನ ಚೇರಮೆನ್ ಆಗಿದ್ದು ಎಂದರೆ ಸರಿ. ಆ ರೀತಿ ನಾನು ಒಂದನೇ ಅರ್ಜಿದಾರ ಟ್ರಸ್ಟನ ಚೇರಮೆನ್ ಆದ ನಂತರ ಸುರೇಶನಿಗೆ ಗೊತ್ತಾಗದಂತೆ ನಾನು ಹಾಗೂ 3 ಮತ್ತು 4 ನೇ ಅರ್ಜಿದಾರರು ಸೇರಿ ಟ್ರಸ್ಟನ ಆದಾಯದ ಹಣವನ್ನು ನಮ್ಮ ಸ್ವಂತಕ್ಕಾಗಿ ದುರುಪಯೋಗಿ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ಹಣ ದುರುಪಯೋಗ ಪಡಿಸಿದ್ದು ಆಡಿಟ್ ಪರಿಶೀಲನೆಯಲ್ಲಿ ತಿಳಿದು ಬಂದಿರುತ್ತದೆ ಮತ್ತು ನನ್ನನ್ನು ಒಂದನೇ ಅರ್ಜಿದಾರ ಟ್ರಸ್ಟಿನ ಚೇರಮೆನಶಿಪ್‌ನಿಂದ ತೆಗೆದು ಹಾಕಲಾಗಿತ್ತು ಎಂದರೆ ಸರಿಯಲ್ಲ. ಆ ರೀತಿ ನನ್ನನ್ನು ಚೇರಮೆನಿಶಿಪನಿಂದ ತೆಗೆದು ಹಾಕಿದರೇ ಅಸಹ್ಯವಾಗುತ್ತದೆ ಎನ್ನುವ ಕಾರಣಕ್ಕೆ ದಿನಾಂಕ 01.11.2016 ರಂದು ನಾನೇ ಸ್ವತಃ ನನ್ನ ಸ್ವಇಚ್ಛೆಯಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 01.11.2016 ರಂದು ಸಭೆ ನಡೆದು ಸದರಿ ಸಭೆಯಲ್ಲಿ ಒಂದನೇ ಅರ್ಜಿದಾರ ಟ್ರಸ್ಟನ್ನು ಸುರೇಶ ಅವರೇ ನೋಡಿಕೊಂಡು ಹೋಗಬೇಕು ಮತ್ತು ಪಿತ್ರಾರ್ಜಿತ ಆಸ್ತಿಯನ್ನು ನಮ್ಮಲ್ಲಿ ಪಾಲು ಮಾಡಿಕೊಂಡು ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿ. ಸದರಿ ಮಾತುಕತೆಯನ್ನು ಎಲ್ಲರೂ ಒಪ್ಪಿ ಕೊಂಡಿದ್ದರು ಎಂದರೆ ಸರಿಯಲ್ಲ. ಆ ದಿನ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ನಾನು ಅಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ ಎಂದು ತೀರ್ಮಾನವಾಗಿತ್ತು ಎಂದರೆ ಸರಿಯಲ್ಲ. ಸದರಿ ಆಡಳಿತ ಮಂಡಳಿ ಸಭೆಯಲ್ಲಿ 2016-2017 ವರ್ಷದ ಮಧ್ಯದಲ್ಲಿ ಒಂದನೇ ಅರ್ಜಿದಾರ ಟ್ರಸ್ಟನ ಚೇರಮೆನ್ ಆಗಿ ಸುರೇಶ

ಅವರನ್ನು ಆಯ್ಕೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಸಭೆಯಲ್ಲಿ ಒಂದನೇ ಅರ್ಜಿದಾರ ಟ್ರಸ್ಟನ ಆಡಳಿತ ಮತ್ತು ಹಣದ ವ್ಯವಹಾರವನ್ನು ಸುರೇಶ ಅವರಿಗೆ ವಹಿಸಿಕೊಡಲಾಗಿತ್ತು ಎಂದರೆ ಸರಿಯಲ್ಲ.

ಒಂದನೇ ಅರ್ಜಿದಾರ ಟ್ರಸ್ಟನಿಂದ ನನಗೆ ಪ್ರತಿ ತಿಂಗಳು ಗೌರವಧನವಾಗಿ ರೂ.18,000/- ಬರುತ್ತಿದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಆಡಳಿತ ಮಂಡಳಿ ಸಭೆಯಲ್ಲಿ ಮಾಜಿ ಅಧ್ಯಕ್ಷರಿಗೆ ಮತ್ತು ಹಾಲಿ ಅಧ್ಯಕ್ಷರಿಗೆ ತಿಂಗಳಿಗೆ ತಲಾ ರೂ.18,000/-ರಂತೆ ಗೌರವ ಧನ ನೀಡಬೇಕು ಎಂದು ತೀರ್ಮಾನವಾಗಿತ್ತು ಮತ್ತು ಅದರಂತೆ ರೂ. 18,000/- ತಿಂಗಳಿಗೆ ಗೌರವಧನವನ್ನು ಒಂದನೇ ಅರ್ಜಿದಾರ ಟ್ರಸ್ಟನಿಂದ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 01.11.2016 ರಂದು ಆಡಳಿತ ಮಂಡಳಿ ಸಭೆ ನಡೆದು ಈ ಮೇಲೆ ಹೇಳಿದಂತೆ ತೀರ್ಮಾನಗಳಾಗಿದ್ದು ಮತ್ತು ನಾನು ಒಂದನೇ ಅರ್ಜಿದಾರ ಟ್ರಸ್ಟನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಗೊತ್ತಿದ್ದರೂ ಸಹ ಈಗ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುರೇಶ ತೀರಿಕೊಳ್ಳುವ ತನಕ ಅವರೇ ಒಂದನೇ ಅರ್ಜಿದಾರ ಟ್ರಸ್ಟನ ಅಧ್ಯಕ್ಷರಾಗಿ ಟ್ರಸ್ಟನ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಎರಡನೇ ಮತ್ತು ಮೂರನೇ ಎದುರುದಾರರು ಒಂದನೇ ಅರ್ಜಿದಾರ ಟ್ರಸ್ಟಿನಲ್ಲಿ ವಿದ್ಯಾಭ್ಯಾಸ ಮಾಡಿದ್ದು ಎಂದರೆ ಸರಿ. ಒಂದನೇ ಅರ್ಜಿದಾರ ಟ್ರಸ್ಟನ ಅಧ್ಯಕ್ಷರ ಮಕ್ಕಳಾಗಿದ್ದರೂ ಸಹ ಎರಡನೇ ಮತ್ತು ಮೂರನೇ ಎದುರುದಾರರು ಶಾಲಾ ಫೀ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎರಡನೇ ಎದುರುದಾರನು ಹತ್ತನೇ ತರಗತಿಯಲ್ಲಿ ಓದುತ್ತಿದ್ದಾಗ ಶಾಲಾ ಫೀ ಕಟ್ಟಿಲ್ಲ ಎನ್ನುವ ಕಾರಣಕ್ಕೆ ಆತನನ್ನು ಪರೀಕ್ಷೆಗೆ ಕುಳಿತುಕೊಳ್ಳಲು ಬಿಡಬಾರದು ಎಂದು ಮೂರನೇ ಅರ್ಜಿದಾರರು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಒಂದನೇ ಎದುರುದಾರರ ತಂದೆ ಎರಡನೇ ಎದುರುದಾರನ ಶಾಲಾ ಫೀ

ಪಾವತಿ ಮಾಡಿದ್ದು ಮತ್ತು ಆ ಕಾರಣಕ್ಕೆ ಎರಡನೇ ಎದುರುದಾರನನ್ನು ಪರೀಕ್ಷೆ ಬರೆಯಲು ಅವಕಾಶ ನೀಡಿದ್ದು ಎಂದರೆ ಸರಿಯಲ್ಲ. ಸುರೇಶ ತೀರಿಕೊಂಡ ನಂತರ ಎರಡರಿಂದ ನಾಲ್ಕನೇ ಎದುರುದಾರರ ವಿದ್ಯಾಭ್ಯಾಸಕ್ಕೆ ಮತ್ತು ಅವರ ಜೀವನಕ್ಕೆ ಯಾವುದೇ ಸಹಾಯ ಮಾಡದೆ ಎದುರುದಾರರಿಗೆ ಮಾನಸಿಕ, ದೈಹಿಕ ತೊಂದರೆ ನೀಡಿ ಅವರನ್ನು ಊರಿನಿಂದ ಹೊರಗೆ ಹಾಕಿದ್ದು ಎಂದರೆ ಸರಿಯಲ್ಲ.

ಸುರೇಶ ಜೀವಂತ ಇದ್ದಾಗ ಒಂದನೇ ಎದುರುದಾರಳು ಒಂದನೇ ಅರ್ಜಿದಾರ ಟ್ರಸ್ಟನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸುರೇಶ ತೀರಿಕೊಂಡ ನಂತರ ತನ್ನ ಮತ್ತು ತನ್ನ ಮಕ್ಕಳು ಜೀವನೋಪಾಯಕ್ಕಾಗಿ ಮತ್ತು ಅವರ ಶಿಕ್ಷಣಕ್ಕಾಗಿ ಒಂದನೇ ಅರ್ಜಿದಾರ ಟ್ರಸ್ಟನಲ್ಲಿ ಕೆಲಸ ಕೊಡಿ ಮತ್ತು ಒಂದನೇ ಅರ್ಜಿದಾರ ಟ್ರಸ್ಟನಲ್ಲಿ ಸುರೇಶ ಅವರಿಗೆ ಬರುವ ಆದಾಯದ ಹಣವನ್ನು ನೀಡಿ ಎಂದು ಒಂದನೇ ಎದುರುದಾರಳು ನಮ್ಮಲ್ಲಿ ಕೇಳಿಕೊಂಡಿದ್ದಳು ಎಂದರೆ ಸರಿಯಲ್ಲ. ಒಂದನೇ ಎದುರುದಾರಳು ಒಂದನೇ ಅರ್ಜಿದಾರ ಟ್ರಸ್ಟನ್ನು ಬಿಟ್ಟುಕೊಟ್ಟರೇ ಸುರೇಶನಿಗೆ ಬರುವ ಆದಾಯವನ್ನು ಮತ್ತು ಆಸ್ತಿಯನ್ನು ಆಕೆಗೆ ಬಿಟ್ಟುಕೊಡುತ್ತೇವೆ ಎಂದು ನಾವು ಹೇಳಿರುತ್ತೇವೆ ಮತ್ತು ಈ ಬಗ್ಗೆ ಹಿರಿಯರನ್ನು ಸೇರಿಸಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ.

ಸುರೇಶ ತೀರಿಕೊಂಡ ನಂತರ ಅವರಿಗೆ ಒಂದನೇ ಅರ್ಜಿದಾರ ಟ್ರಸ್ಟನಲ್ಲಿ ಇದ್ದ ಸಂಬಳ ಮತ್ತು ಪಿ ಎಫ್ ಹಣ ನೀಡುವಂತೆ ಕೋರಿ ಒಂದನೇ ಎದುರುದಾರಳು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಮನವಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ಶಿಕ್ಷಣ ಇಲಾಖೆಯವರು ನಮಗೆ ವರದಿ ನೀಡಿದ್ದರು ಮತ್ತು ನಾವು ಒಂದನೇ ಎದುರುದಾರರಿಗೆ ಸುರೇಶನಿಗೆ ಸಂಬಂಧಪಟ್ಟ ಯಾವುದೇ ಆದಾಯದ ಹಣ ಮತ್ತು ಪಿ ಎಫ್ ಹಣವನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಸುರೇಶ ಅವರ ವಾರಸುದಾರರಾಗಿ ಒಂದನೇ ಅರ್ಜಿದಾರ ಟ್ರಸ್ಟನ ಸಂಬಂಧಪಟ್ಟ ದಾಖಲೆಗಳನ್ನು ನೀಡುವಂತೆ ಒಂದನೇ ಎದುರುದಾರಳು

ನಮ್ಮಲ್ಲಿ ಕೇಳಿದ್ದಳು ಮತ್ತು ನಾವು ಆಕೆಗೆ ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಂತರ ಒಂದನೇ ಎದುರುದಾರಳು ಒಂದನೇ ಅರ್ಜಿದಾರ ಟ್ರಸ್ಟನ ಕ್ಯಾಂಬ್ರೆಜ ಇಂಗ್ಲಿಷ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕರಿಗೆ ಸುರೇಶ ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡುವಂತೆ ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ 2021 ರಲ್ಲಿ ಅರ್ಜಿ ನೀಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ಸದರಿ ಶಾಲೆಯ ಮುಖ್ಯ ಶಿಕ್ಷಕಿಯಾಗಿ ಸುಜಾತಾ ಸುಳ್ಳದ ಇದ್ದರು ಎಂದರೆ ಸರಿ. ಒಂದನೇ ಎದುರುದಾರಳು ಕೇಳಿರುವ ದಾಖಲೆಗಳನ್ನು ನೀಡಬೇಕು ಎಂದು ಮುಖ್ಯ ಶಿಕ್ಷಕಿ ಟ್ರಸ್ಟನ ಮಂಡಳಿಯಲ್ಲಿ ಕೇಳಿಕೊಂಡಾಗ ನಾವು ಒಂದನೇ ಎದುರುದಾರಳಿಗೆ ಯಾವುದೇ ದಾಖಲೆಗಳನ್ನು ನೀಡದೇ ಅವರ ಕೋರಿಕೆಯನ್ನು ತಿರಸ್ಕರಿಸಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಮಯವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.